**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆಗಳ ಇಲಾಖೆ)**

ವಾಣಿಜ್ಯ ತೆರಿಗೆ ಅಪರ ಆಯುಕ್ತರವರ ಕಛೇರಿ, (ಜಾರಿ)–ದಕ್ಷಿಣ ವಲಯ,
ವಾಣಿಜ್ಯ ತೆರಿಗೆ ಕಾರ್ಯಾಲಯ–2, ಬಿ ಬ್ಲಾಕ್, ಕೋರಮಂಗಲ, ಬೆಂಗಳೂರು–560 047

ಸಂ.ವಾತೆಅಆ/ಜಾರಿ/ದವ/ಲೇ.ಸಾ/ಸಿಆರ್–04/2023–24 ದಿನಾಂಕ:20–02–2024

# ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ)–ದಕ್ಷಿಣ ವಲಯ, ಬೆಂಗಳೂರು ಈ ಕಛೇರಿಯ ಆವರಣದಲ್ಲಿ ಸೇವಾ ಗುತ್ತಿಗೆ ಆಧಾರದ ಮೇಲೆ ನೆರಳಚ್ಚು (Photo Copying) ಸೇವೆಯನ್ನು ಪಡೆಯಲು ಟೆಂಡರ್ ಕರೆಯಲಾಗಿದೆ. ಈ ಕಾರ್ಯವನ್ನು ಮಾಡಲು ಆಸಕ್ತ ಬಿಡ್ಡುದಾರರು, ಜೆರಾಕ್ಸ್ ಯಂತ್ರಗಳನ್ನು ಹೊಂದಿರುವ ಮತ್ತು ಅನುಭವ ಹೊಂದಿರುವ ಸಂಸ್ಥೆಗಳು ಮುಚ್ಚಿದ ಲಕೋಟೆಯಲ್ಲಿ ದಾಖಲೆಗಳೊಂದಿಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದೊಳಗೆ ಸದರಿ ಕಛೇರಿಯ ಲೇಖನ ಸಾಮಾಗ್ರಿಗಳ ಶಾಖೆ, **ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಕೇ.ಕ),** ಇವರಲ್ಲಿ ಸಂಪರ್ಕಿಸಬಹುದು ಅಥವಾ ಇಲಾಖೆಯ ಜಾಲತಾಣ http://ctax.kar.nic.inರಲ್ಲಿ ಪಡೆಯಬಹುದಾಗಿರುತ್ತದೆ.

| | | |
|---|---|---|
| 1 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 11-03-2024 05-00 p.m. |
| 2 | ಟೆಂಡರ್‌ಗಳನ್ನು ತೆರೆಯುವ ದಿನಾಂಕ | 12-03-2024 at 11-30 a.m. |

20/02/2024.

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರವರ ಪರವಾಗಿ
(ಜಾರಿ) ದಕ್ಷಿಣ ವಲಯ ಬೆಂಗಳೂರು.

ವಾಣಿಜ್ಯ ತೆರಿಗೆ ಅಪರ ಆಯುಕ್ತರು ಪರವಾಗಿ,
(ಜಾರಿ), ದಕ್ಷಿಣ ವಲಯ, ಬೆಂಗಳೂರು

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ಸಂ.ವಾತೆಅಆ/ಜಾರಿ/ದವ/ಲೇ.ಸಾ/ಸಿಆರ್-04/2023-24

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರವರ ಕಛೇರಿ,
(ಜಾರಿ)-ದಕ್ಷಿಣ ವಲಯ, ವಾಣಿಜ್ಯ ತೆರಿಗೆ
ಕಾರ್ಯಾಲಯ-2, ಬಿ ಬ್ಲಾಕ್,ಕೋರಮಂಗಲ,
ಬೆಂಗಳೂರು-560047,ದಿನಾಂಕ:20-02-2024.

# ಪ್ರಕಟಣೆ

ವಿಷಯ: ಈ ವಿಭಾಗದ ಕಛೇರಿಯ ಉಪಯೋಗಕ್ಕಾಗಿ ಜೆರಾಕ್ಸ್ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ತಗಲುವ ವೆಚ್ಚಕ್ಕೆ ದರಪಟ್ಟಿ ಕೋರುವ ಬಗ್ಗೆ.

* * *

ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ)-ದಕ್ಷಿಣ ವಲಯ, ಬೆಂಗಳೂರು ಈ ಕಛೇರಿಯ ಆವರಣದಲ್ಲಿ ಸೇವಾ ಗುತ್ತಿಗೆ ಆಧಾರದ ಮೇಲೆ ನೆರಳಚ್ಚು (Photo Copying) ಸೇವೆಯನ್ನು ಪಡೆಯಲು ದರಪಟ್ಟಿ ಸಲ್ಲಿಸಲು ಕೋರಲಾಗಿದೆ. ಈ ಸೇವೆಯನ್ನು ಒದಗಿಸಲು ಆಸಕ್ತಿಯುಳ್ಳ ಗ್ರಾಹಕರು ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿ, ಇಡಿಗಂಟಿನ ಮೊತ್ತ ರೂ.10,000/- ಹಾಗೂ ಇತರೆ ದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:11-03-2024ರ ಸಂಜೆ 05:30ಕ್ಕೆ, ಆ ನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಕೆಳಕಂಡ ನಿಬಂಧನೆಗಳನ್ನು ವಿಧಿಸಲಾಗಿದೆ.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು:**

| | |
|---|---|
| 1 | ಸೇವಾ ಗುತ್ತಿಗೆ ನೀಡುವವರ ಹೆಸರು ವಿಳಾಸ, ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ |
| 2 | ಈ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಗ್ಗೆ ದಾಖಲೆ |
| 3 | ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು |
| 4 | ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆ ಅಪರ ಆಯುಕ್ತರವರ ಕಛೇರಿ(ಜಾರಿ)-ದಕ್ಷಿಣ ವಲಯ, ಕೊಠಡಿ ಸಂಖ್ಯೆ-308, ಮೂರನೇ ಮಹಡಿ, ಬಿ ಬ್ಲಾಕ್, ವಾಣಿಜ್ಯ ತೆರಿಗೆ ಕಾರ್ಯಾಲಯ-2, ಕೋರಮಂಗಲ, ಬೆಂಗಳೂರು ಇವರ ಶಾಖೆಯಲ್ಲಿ ಸಲ್ಲಿಸುವುದು ಹಾಗೂ ಅರ್ಜಿಗಳ ಸ್ವೀಕೃತಿ ಅನುಸಾರವಾಗಿ ಕ್ರಮ ಸಂಖ್ಯೆ ನೀಡಲಾಗುವುದು. |
| 5 | ಅರ್ಜಿಗಳನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ಷರತ್ತುಗಳ ವಿವರಗಳ ಪಟ್ಟಿ ಅನ್ವಯ ಖಡ್ಡಾಯವಾಗಿ ನಿಯಮಗಳನ್ನು ಅರ್ಹಗೊಳ್ಳುವ ಸಂಸ್ಥೆಯವರು ಪಾಲಿಸತಕ್ಕದ್ದು |
| 6 | ಅರ್ಹಗೊಂಡ ಸಂಸ್ಥೆಯ ಪ್ರಕಟಣೆ ದಿನಾಂಕ 12-03-2024 |

## ಷರತ್ತು ಮತ್ತು ನಿಬಂಧನೆಗಳು:

| | |
|---|---|
| 01 | ಆರ್ಥಿಕವಾಗಿ ಸಧೃಢರಾಗಿರಬೇಕು. ಬ್ಯಾಂಕಿನಲ್ಲಿ ಖಾತೆ ಹೊಂದಿರಬೇಕು, ಆದಾಯ ತೆರಿಗೆ ನೋಂದಾಯಿತರಾಗಿರಬೇಕು ಹಾಗೂ ಈ ಕ್ಷೇತ್ರದಲ್ಲಿ ಅನುಭವ ಹೊಂದಿರಬೇಕು. |
| 02 | ಸೇವಾ ಗುತ್ತಿಗೆದಾರರು ಸ್ವಂತ: ನವೀನ ಮಾದರಿಯ ಉತ್ತಮ ಗುಣಮಟ್ಟದ ಹಾಗೂ ಉತ್ತಮ ಕಾರ್ಯ ಕ್ಷಮತೆಯನ್ನು ಹೊಂದಿರುವ ಕನಿಷ್ಠ 2 ಜೆರಾಕ್ಸ್ ಯಂತ್ರಗಳನ್ನು ಹೊಂದಿರಬೇಕು. |
| 03 | ಈಗಾಗಲೇ ಯಾವುದಾದರೂ ಸರ್ಕಾರಿ ಕಛೇರಿಗಳಿಗೆ ಈ ಸೇವೆಯನ್ನು ಒದಗಿಸಿದ್ದಲ್ಲಿ ವಿವರಗಳನ್ನು ಒದಗಿಸುವುದು. |
| 04 | ಯಾವುದೇ ಸೂಚನೆ ನೀಡದೆ ಟೆಂಡರ್ ಅನ್ನು ತಿರಸ್ಕರಿಸುವ, ಹಿಂಪಡೆಯುವ ಮತ್ತು ಯಾವುದೇ ಸಂದರ್ಭಗಳಲ್ಲಿ ಸೇವೆಯನ್ನು ರದ್ದುಗೊಳಿಸುವ ಹಕ್ಕು ವಾಣಿಜ್ಯ ತೆರಿಗೆ ಆಯುಕ್ತರಿಗೆ / ಅಪರ ಆಯುಕ್ತರಿಗೆ ಇರುತ್ತದೆ. |
| 05 | ಸಾಲದ ರೂಪದಲ್ಲಿ ಸೇವೆಯನ್ನು ಒದಗಿಸಬೇಕಾಗಿದ್ದು ಅಯಾ ತಿಂಗಳ ಬಿಲ್ಲುಗಳನ್ನು ಸಲ್ಲಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ ವಿದ್ಯುಚ್ಛಕ್ತಿ ಬಳಕೆಯ ಆಧಾರದ ಮೇಲೆ ಕಾಲ ಕಾಲಕ್ಕೆ ಬದಲಾಗುವ ವಿದ್ಯುತ್ ದರದ ಮೊತ್ತವನ್ನು ಕಳೆದು ಬಾಕಿ ಮೊತ್ತವನ್ನು ಆನ್‌ಲೈನ್ ಮೂಲಕ ಪಾವತಿಸಲಾಗುವುದು. |

20/02/2024

ವಾಣಿಜ್ಯ ತೆರಿಗೆ ಅಪರ ಆಯುಕ್ತರವರ ಪರವಾಗಿ
(ಜಾರಿ) ದಕ್ಷಿಣ ವಲಯ, ಬೆಂಗಳೂರು.

ವಾಣಿಜ್ಯ ತೆರಿಗೆ ಅಪರ ಆಯುಕ್ತರು ಪರವಾಗಿ,
(ಜಾರಿ), ದಕ್ಷಿಣ ವಲಯ, ಬೆಂಗಳೂರು

**ಪ್ರತಿಗಳನ್ನು :-**

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿವಿಓ–01, 02, 03, 04, 05 ಮತ್ತು 06 ಬೆಂಗಳೂರು, ಸದರಿ ಪ್ರಕಟಣೆಯನ್ನು ಸೂಚನಾ ಪಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
3. ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕಕ್ಕೆ.
4. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, ಗಣಕ ಕೇಂದ್ರ, ಬೆಂಗಳೂರು ಇವರಿಗೆ ಸದರಿ ಪತ್ರವನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ಕಛೇರಿಯ ಕಡತಕ್ಕೆ.